ಐಸಿಎಆರ್ ಜೆಎಸ್‌ಎಸ್
ಕೃಷಿ ವಿಜ್ಞಾನ ಕೇಂದ್ರ, ಸುತ್ತೂರು

# ಏಕದಳ ಧಾನ್ಯ ಬೆಳೆಗಳು



ಲೇಖಕರು
ಶ್ರೀ ಶಾಮರಾಜ್
ಶ್ರೀಮತಿ ಹೆಚ್. ವಿ. ದಿವ್ಯಾ
ಶ್ರೀಮತಿ ನೇತ್ರಾವತಿ ಎತ್ತಿನಮನಿ





## ಏಕದಳ ಧಾನ್ಯಗಳು

ಮಾನವನ ಆರೋಗ್ಯಕ್ಕೆ ಉತ್ತಮ ಆಹಾರ ಅವಶ್ಯಕ. ಪ್ರಕೃತಿಯಲ್ಲಿ ಸಿಗುವ ವೈವಿಧ್ಯಮಯ ಆಹಾರಗಳನ್ನು ಅವುಗಳು ದೇಹಕ್ಕೆ ನೀಡುವ ಪೌಷ್ಟಿಕಾಂಶಗಳ ಆಧಾರದ ಮೇಲೆ ವಿವಿಧ ಗುಂಪುಗಳಾಗಿ ವಿಂಗಡಿಸಲಾಗಿದೆ. ಅವುಗಳಲ್ಲಿ ಏಕದಳ ಧಾನ್ಯಗಳೂ ಸಹ ಸೇರಿವೆ. ಏಕದಳ ಧಾನ್ಯಗಳೆಂದರೆ ಜೋಳ, ಗೋಧಿ, ಅಕ್ಕಿ, ಮುಸುಕಿನ ಜೋಳ. ಈ ಧಾನ್ಯಗಳು ನಮ್ಮ ದೇಹಕ್ಕೆ ಬೇಕಾಗುವ ಶರ್ಕರಪಿಷ್ಟ, ನಾರಿನಾಂಶ ಮತ್ತು ಬಿ ಅನ್ನಾಂಗಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನೀಡುತ್ತವೆ. ಪ್ರತಿ 1 ಗ್ರಾಂ ಶರ್ಕರಪಿಷ್ಟವು 4 ಕಿಲೋ ಕ್ಯಾಲರಿಯಷ್ಟು ಶಕ್ತಿಯನ್ನು ನೀಡುತ್ತದೆ. ನಮ್ಮ ದಿನನಿತ್ಯದ ಆಹಾರದಲ್ಲಿ ಶೇ.60 ರಷ್ಟು ಶಕ್ತಿಯು ಶರ್ಕರಪಿಷ್ಟ ಆಹಾರದಿಂದ ಬರಬೇಕು.

**ಏಕದಳ ಧಾನ್ಯಗಳಲ್ಲಿರುವ ಪೋಷಕಾಂಶಗಳ ಪಟ್ಟಿ**

| ಪೋಷಕಾಂಶಗಳು | ಅಕ್ಕಿ | ಗೋಧಿ | ಜೋಳ | ಮೆಕ್ಕೆ ಜೋಳ |
|---|---|---|---|---|
| ಶಕ್ತಿ (ಕಿಲೋ ಕ್ಯಾಲರಿ) | 345 | 346 | 349 | 342 |
| ಪ್ರೋಟೀನ್ (ಗ್ರಾಂ) | 6.80 | 11.80 | 10.40 | 11.10 |
| ಕೊಬ್ಬು (ಗ್ರಾಂ) | 0.50 | 1.50 | 1.90 | 3.60 |
| ನಾರು (ಗ್ರಾಂ) | 0.20 | 1.20 | 1.60 | 2.70 |
| ಶರ್ಕರಪಿಷ್ಟ (ಗ್ರಾಂ) | 78.20 | 71.20 | 72.60 | 66.20 |
| ಖನಿಜ(ಗ್ರಾಂ) | 0.60 | 1.50 | 1.60 | 1.50 |
| ಸುಣ್ಣ (ಮಿ.ಗ್ರಾಂ) | 10.00 | 41.00 | 25.00 | 10.00 |
| ಕಬ್ಬಿಣ (ಮಿ.ಗ್ರಾಂ) | 0.70 | 5.30 | 4.00 | 2.30 |

## ಮೆಕ್ಕೆ ಜೋಳ

**ತಳಿ: ಸಂಕರಣ ತಳಿ 5404**

ತಳಿಯ ವೈಶಿಷ್ಟ್ಯತೆಗಳು– ಇದು ಹೈಟೆಕ್ ಕಂಪನಿಯ ಸಂಕರಣ ತಳಿ. ಟಿಎಲ್‌ಬಿ (ಟರಸಿಕಮ್ ಲೀಫ್ ಬ್ಲೈಟ್) ರೋಗ ತಡೆದು ಕೊಳ್ಳುವ ಶಕ್ತಿ ಹೊಂದಿದೆ. ಅತಿ ಉದ್ದದ ಪೂರ್ತಿ ತುಂಬಿದ ತೆನೆ. ಹಸಿರು ಜೋಳದ ತೆನೆ ಕಟಾವಿಗೂ ಉಪಯೋಗಿಸಬಹುದು.



**ಬೆಳೆಯ ಅವಧಿ:** 115–120 ದಿನಗಳು

**ಇಳುವರಿ:** ಉತ್ತಮ ನಿರ್ವಹಣೆಯಲ್ಲಿ ಎಕರೆಗೆ 16–18 ಕ್ವಿ ಕಾಳಿನ ಇಳುವರಿ ಹಾಗು 2.2–2.5 ಟನ್ ಮೇವಿನ ಇಳುವರಿಯನ್ನು ನಿರೀಕ್ಷಿಸಬಹುದು.

**ತಳಿ: ಸಂಕರಣ ತಳಿ 5109**

**ಬೆಳೆಯ ಅವಧಿ: 110–120 ದಿನಗಳು**

ತಳಿಯ ವೈಶಿಷ್ಟ್ಯತೆಗಳು– ಇದು ಹೈಟೆಕ್ ಕಂಪನಿಯ ಸಂಕರಣ ತಳಿ. ಟಿಎಲ್‌ಬಿ (ಟರಸಿಕಮ್ ಲೀಫ್ ಬ್ಲೈಟ್) ರೋಗ, ತುಕ್ಕು ರೋಗ, ತೆನೆ ತುದಿ ಕೊಳೆ ರೋಗ ತಡೆದುಕೊಳ್ಳುವ ಶಕ್ತಿ ಹೊಂದಿದೆ. ಅತಿ ಉದ್ದದ ಪೂರ್ತಿ ತುಂಬಿದ ತೆನೆ. ಉತ್ತಮ ಗುಣಮಟ್ಟದ ಸದೃಢ ಕಾಳುಗಳನ್ನು ಹೊಂದಿರುತ್ತದೆ.

**ಇಳುವರಿ:** ಉತ್ತಮ ನಿರ್ವಹಣೆಯಲ್ಲಿ ಎಕರೆಗೆ 16–18 ಕ್ವಿ ಕಾಳಿನ ಇಳುವರಿ ಹಾಗು 2.2–2.5 ಟನ್ ಮೇವಿನ ಇಳುವರಿಯನ್ನು ನಿರೀಕ್ಷಿಸಬಹುದು.

## ಗೋಧಿ

**ತಳಿ: ಸ್ಥಳೀಯ**

**ಬೆಳೆಯ ಅವಧಿ:** 120 ದಿನಗಳು

**ಇಳುವರಿ:** ಉತ್ತಮ ನಿರ್ವಹಣೆಯಲ್ಲಿ ಎಕರೆಗೆ 15–25 ಕ್ವಿ ಕಾಳಿನ ಇಳುವರಿ ಹಾಗು 1.8–2.2 ಟನ್ ಮೇವಿನ ಇಳುವರಿಯನ್ನು ನಿರೀಕ್ಷಿಸಬಹುದು.



## ಬಿಳಿ ಜೋಳ

**ತಳಿ: ಹೈಟೆಕ್ 3201**

**ಬೆಳೆಯ ಅವಧಿ:** 120–125 ದಿನಗಳು

ತಳಿಯ ವೈಶಿಷ್ಟ್ಯತೆಗಳು– ಇದು ಹೈಟೆಕ್ ಕಂಪನಿಯ ಸಂಕರಣ ತಳಿ. ಹೆಚ್ಚಿನ ಇಳುವರಿ ನೀಡುತ್ತದೆ. ಉತ್ತಮ ಗುಣಮಟ್ಟದ ಮುತ್ತಿನಂತಹ ಬಿಳಿಯ ಸದೃಢ ಕಾಳುಗಳನ್ನು ಹೊಂದಿರುತ್ತದೆ.

**ಇಳುವರಿ:** ಉತ್ತಮ ನಿರ್ವಹಣೆಯಲ್ಲಿ ಎಕರೆಗೆ 20–25 ಕ್ವಿ ಕಾಳಿನ ಇಳುವರಿ ಹಾಗೂ 3.5–4.5 ಟನ್ ಮೇವಿನ ಇಳುವರಿಯನ್ನು ನಿರೀಕ್ಷಿಸಬಹುದು.

